'ಅಷ್ಟಕ್ಕೂ ಮನಸ್ಸು ಖುಷಿ ಪಟ್ಟಿತೇ?' ಕೇಳಿಕೊಂಡಳು. 'ಸದ್ಯಕ್ಕಂತೂ ಖುಷಿಯಲ್ಲಿದಿನಿ.' ಬಂದು ತಲುಪಿದ್ದಕ್ಕೆ ವಿಜ್ಜುಗೆ ಫೋನ್ ಮಾಡಿದಾಗ ಸ್ವಲ್ಪವೂ ಅಸಹನೆ ತೋರದೇ 'ಟೇಕ್ ಕೇರ್' ಅಂದು ಫೋನ್ ಇಟ್ಟಿದ್ದ.

ಒಬ್ಬಳೇ ಗೋವಾಕೆ ಹೋಗ್ತಾ ಇದೀನಿ ಎಂದಾಗಲೂ ವಿಜ್ಜು ಸ್ವಲ್ಪವೂ ವಿಚಲಿತನಾಗಿರಲಿಲ್ಲ. ಗೆಳತಿ ಅನಿತಾ ಲೋಬೊಳಲ್ಲಿ ಅವಳ ಸರ್ವಿಸ್ ಅಪಾರ್ಟ್‌ಮೆಂಟಿನ ವಿಷಯ ಮಾತಾಡುತ್ತಿದ್ದಾಗಲೂ ಯಾಕೆ, ಏನು ಎಂದು ಏನನ್ನೂ ಪ್ರಶ್ನಿಸಿರಲಿಲ್ಲ. ಇದೂ ಅಸಡ್ಡೆನಾ ಎಂದೂ ಒಮ್ಮೆ ಅನಿಸಿತ್ತಾದರೂ ಪಲ್ಲವಿಗೆ ಯಾವುದನ್ನೂ ಯೋಚಿಸುವ ವ್ಯವಧಾನವಿರಲಿಲ್ಲ. ಅಮ್ಮನಿಗೆ ಸಿಟ್ಟು ಬಂದಿತ್ತು, ಪಾಪ! ಇಂತಹ ಯೋಚನೆಗಳೂ ಅವಳಿಗೆ ಅಸಾಧ್ಯ. ಅವಳ ಜಮಾನಾದ ಮನಃಸ್ಥಿತಿಯೇ, ಯೋಚನೆಗಳೇ ಬೇರೆ. 'ಹೀಗೆ ಒಬ್ಬಳೇ ಗೋವಾ ಸುತ್ತಾಡುವ ಅಗತ್ಯವಾದರೂ ಏನಿದೆ ಪಲ್ಲು?' ಎಂದು ಖಾರವಾಗಿಯೇ ಕೇಳಿದ್ದಳು. 'ಬಿಡಮ್ಮ, ಎಲ್ಲ ಸೇಫ್ ಇದೆ. ಗೋವಾ ಎಂದ ತಕ್ಷಣ ಹಿಪ್ಪಿಗಳದ್ದೇ ಊರು ಎಂದುಕೊಳ್ಳಬೇಡ. ಗೋವಾ ಸೇಫೆಸ್ಟ್ ಸಿಟಿ, ಇರೋದ್ರಲ್ಲಿ. ಏನೋ ಮನ್ಸು ಸರಿಯಿಲ್ಲ. ದೂರ ಹೋಗಬೇಕೆನಿಸಿದೆ ಅಷ್ಟೇ' ಎಂದು ಅರ್ಥ ಮಾಡಿಸುವಷ್ಟರಲ್ಲಿ ಸಾಕಾಗಿತ್ತು. ಅಪ್ಪ ಒಂದೂ ಮಾತಾಡಿರಲಿಲ್ಲ. ಹೊರಡುವಾಗ ಅಮ್ಮ, ವಿಜ್ಜು ಮುಖವನ್ನು ಮುಜುಗರದಿಂದ ನೋಡುತ್ತಿದ್ದುದು ಎಲ್ಲ ನೆನಪಾದಾಗ ಹೀಗೆ ಏಕಾಏಕಿ ನಾನು ಗೋವಾಕ್ಕೆ ಹೊರಟು ಬಂದುದು ಸರಿನಾ... ಎನ್ನುವ ಯೋಚನೆಯ ಜೊತೆಗೆ ಮತ್ತೆ ಅವಳದೆ ಮನಸ್ಸು ಕೂಗಿ ಹೇಳಿತು. 'ನೀನೆ ಅಲ್ಲವೇನೆ ನಿರ್ಧರಿಸಿದ್ದು' ಎಂದು. ದ್ವಂದ್ವದಲ್ಲಿ ಮುಳುಗೇಳುತ್ತಿದ್ದಾಗ ರೂಮಿನ ಬಾಗಿಲು ಡಬಡಬ ಬಡಿದ ಸದ್ದಾಯಿತು. ಕ್ಷಣಕ್ಕೆ ಬೆಚ್ಚಿತು ಪಲ್ಲವಿಯ ಮನಸ್ಸು. ಕೆಳಗೆ ರಿಸೆಪ್ಷನ್ ಕೌಂಟರಿನಲ್ಲಿ ತಾನೊಬ್ಬಳೆ ಬಂದು ಕೀ ಪಡೆದಾಗ ಒಮ್ಮೆ ಮುಜುಗರವಾಗಿದ್ದೂ ನೆನಪಾಗಿ ಭಯವಾಯಿತು. ಯಾರಾದರೂ?... ಮತ್ತೆ ಬಾಗಿಲು ಬಡಿವ ಸದ್ದು. ಎದ್ದು ಪೀಪ್ ಹೋಲಿನಿಂದ ಇಣುಕಿದರೆ ಯಾರೂ ಕಾಣಿಸಲಿಲ್ಲ. ಹೊಡೆದುಕೊಳ್ಳುತ್ತಿದ್ದ ಎದೆ ಸ್ವಲ್ಪ ಸ್ತಿಮಿತಕ್ಕೆ ಬಂತಾದರೂ ಪೂರ್ತಿ ಭಯ ಕಮ್ಮಿಯಾಗಿರಲಿಲ್ಲ. ಬಾಗಿಲಿನ ಲಾಕ್ ಸರಿ ಹಾಕಿದಿನೋ ಇಲ್ಲವೊ ಎಂದು ಮತ್ತೊಮ್ಮೆ ಖಾತರಿಪಡಿಸಿಕೊಂಡು ಮಂಚದ ಬಳಿ ಬಂದರೆ ಮತ್ತೆ ಬಾಗಿಲು ಬಡಿದ ಸದ್ದು. ಕಂಪಿಸಿತು ಮೈ. ಮೆಲ್ಲನೇ ಸದ್ದಾಗದಂತೆ ಬಾಗಿಲ ಬಳಿ ಹೋಗಿ ಮತ್ತೆ ಪೀಪ್ ಹೋಲಿನಿಂದ ಇಣುಕಿದರೆ ಯಾರೂ ಇಲ್ಲ. ವಿಚಲಿತವಾಯಿತು ಮನಸ್ಸು. ಯಾರಾದರೂ ತಾನೊಬ್ಬಳೇ ಇರುವುದನ್ನು ನೋಡಿ ಆಟವಾಡಿಸುತ್ತಿದ್ದಾರೆಯೇ? ಸುಮ್ಮನಿದ್ದಳು ಸ್ವಲ್ಪ ಹೊತ್ತು.

ಗಡಿಯಾರ ನೋಡಿಕೊಂಡರೆ ಇನ್ನೂ ರಾತ್ರಿಯ ಹತ್ತೂವರೆ. ಅಷ್ಟರಲ್ಲಿ ಯಾರೋ ಮಾತಾಡುತ್ತಿದ್ದ ದನಿ ಕೇಳಿ ಮತ್ತೆ ಪೀಪ್ ಹೋಲಿನಿಂದ ಇಣುಕಿದರೆ ಎದುರಿನ ರೂಮಿಗೆ ದಂಪತಿ ಮತ್ತು ಮೂರ್ನಾಲ್ಕು ವರ್ಷದ ಮಗು ಇರುವ ಕುಟುಂಬ ಬಾಗಿಲು ತೆಗೆಯುತ್ತಿದ್ದುದನ್ನು ನೋಡಿ ಧೈರ್ಯದಿಂದ ಬಾಗಿಲು ತೆಗೆದಳು. 'ಎಕ್ಸ್‌ಕ್ಯೂಸ್ ಮೀ. ಬಾಗಿಲು ಬಡಿದಂತಾಯಿತು, ನೀವೇನಾದ್ರೂ ನೋಡಿದ್ರಾ' ಮುಜುಗರ ಪಟ್ಟುಕೊಂಡೇ ಕೇಳಿದಾಗ, ಮಗುವಿನ ತಾಯಿ, 'ಓಹ್ ಸಾರಿ, ಮಗು ನಮ್ಮ ರೂಮ್ ಎಂದು ತಿಳಿದು ನಿಮ್ಮ ರೂಮಿನ ಬಾಗಿಲು ಬಡಿದಿರಬೇಕು' ಎಂದು ಹೇಳಿ ಒಳ ಹೋಗಿದ್ದು ನೋಡಿದಾಗ, ಸಿಟ್ಟು ಬಂದರೂ ತೋರಗೊಡದೇ ನಿಡಿದಾದ ಉಸಿರೆಳೆದುಕೊಂಡಳು. ಅನಿತಾಳ ಮಾತುಗಳು ನೆನಪಾದವು, 'ಡೋಂಟ್ ವರಿ ಪಲ್ಲು, ತುಂಬಾ ಸೇಫ್ಟಿ ಇದೆ, ಫಾರಿನರ್ಸ್ ಎಷ್ಟೆಷ್ಟು ದಿನಗಳ ಕಾಲ ಒಬ್ಬೊಬ್ರೆ ಇರ್ತಾರೆ, ನಮ್ಗಷ್ಟೇ ಇದೆಲ್ಲ ಹೊಸದು. ನಾನು ಗ್ಯಾರಂಟಿ ಕೊಡ್ತಿನಿ. ನಮ್ಮ ಅಪಾರ್ಟ್‌ಮೆಂಟ್ ಫುಲ್ ಸೇಫ್ ಇರುತ್ತೆ; ನಿಂಗೆ ಭಯ ಬೇಡ' ಪಲ್ಲವಿ, ಬಾಗಿಲು ಎಳಕೊಂಡು ಲಾಕ್ ಮಾಡಿ ನಿದ್ರಿಸಲು ನೋಡಿದಳು. ಇಷ್ಟೇ ಏನು ಬದುಕೆಂದರೆ... ಈ ಭಯಗಳೇ ಏನು ನಮ್ಮನ್ನು